RNU AIR DHARWAD

# APRIL 28, 2024

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಕೇಂದ್ರದಿಂದ, ರಾಜ್ಯಕ್ಕೆ ಮೂರು ಸಾವಿರದ 454 ಕೋಟಿ ರೂಪಾಯಿ ಬರ ಪರಿಹಾರ ಬಿಡುಗಡೆ, ಘೋಷಣೆ.**
- **ಕೇಂದ್ರದಿಂದ ಹೆಚ್ಚುವರಿ ಬರ ಪರಿಹಾರ ಹಣ ಬಿಡುಗಡೆ ಕುರಿತು, ಕಾನೂನು ತಜ್ಞರೊಂದಿಗೆ ಚರ್ಚೆ – ಕೃ ್ಣ ಬೈರೇಗೌಡ.**
- **ಪ್ರಧಾನಮಂತ್ರಿ ನರೇಂದ್ರ ಮೋದಿ, ಚುನಾವಣೆ ಪ್ರಚಾರಾರ್ಥ ಇಂದು ಮತ್ತು ನಾಳೆ, ರಾಜ್ಯ ಪ್ರವಾಸ.**
- **'ಕುಂಡ್ಯೋಳಂಡ ಕಪ್ ಹಾಕಿ ಉತ್ಸವ'; ನೆಲ್ಲಮಕ್ಕಡ ಮತ್ತು ಚೇಂದಂಡ ತಂಡಗಳ ನಡುವೆ, ಇಂದು ಫೈನಲ್ ಪಂದ್ಯ.**

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಸರ್ಕಾರ ರಾಜ್ಯಕ್ಕೆ ಮೂರು ಸಾವಿರದ 454 ಕೋಟಿ ರೂಪಾಯಿ ಬರ ಪರಿಹಾರದ ಹಣ ಬಿಡುಗಡೆ ಮಾಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಎನ್.ಡಿ.ಆರ್.ಎಫ್. ನಿಯಮಾವಳಿ ಪ್ರಕಾರ, ರಾಜ್ಯಕ್ಕೆ 18 ಸಾವಿರದ 171 ಕೋಟಿ ರೂಪಾಯಿ ಬರಬೇಕಾಗಿದೆ. ಆದರೆ ಕೇಂದ್ರ ಸರ್ಕಾರ ಈಗ 3 ಸಾವಿರದ 454 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ ಎಂದರು. ರಾಜ್ಯದ 223 ತಾಲೂಕುಗಳನ್ನು ಕಳೆದ ವ ್ಷವೇ ಬರ ಪೀಡಿತವೆಂದು ಘೋ ್ಷಣೆ ಮಾಡಲಾಗಿತ್ತು. ಸುಮಾರು 48 ಲಕ್ಷ ಹೆಕ್ಟೇರ್‌ನಲ್ಲಿನ ಬೆಳೆ ಹಾನಿಯಾಗಿತ್ತು. ಒಟ್ಟಾರೆ ನ ್ಟ 35 ಸಾವಿರ ಕೋಟಿ ರೂಪಾಯಿಗಳಾಗಿತ್ತು. ವಾಸ್ತವ ಸ್ಥಿತಿ ಹೀಗಿದ್ದರೂ, ರಾಜ್ಯ ಕೇಳಿದ್ದು 18 ಸಾವಿರ ಕೋಟಿ ರೂಪಾಯಿ ಮಾತ್ರ ಎಂದು ಮುಖ್ಯಮಂತ್ರಿ ತಿಳಿಸಿದರು.**

<><><>

ಕೇಂದ್ರದಿಂದ ಬರ ಪರಿಹಾರ ಬಿಡುಗಡೆ ವಿಚಾರದಲ್ಲಿ, ರಾಜ್ಯಕ್ಕೆ ನೀಡಬೇಕಾದ ಮೊತ್ತವನ್ನು ನೀಡಿಲ್ಲ. ರಾಜ್ಯ ಸರ್ಕಾರ ಕೇಳಿದ ಹೆಚ್ಚುವರಿ ಮೊತ್ತ ನೀಡುವ ಬಗ್ಗೆಯೂ ಕೇಂದ್ರದಿಂದ ಯಾವುದೇ ಪ್ರಸ್ತಾಪ ಇಲ್ಲ. ಈ ಬಗ್ಗೆ ಕಾನೂನಾತ್ಮಕವಾಗಿ ಪ್ರಶ್ನೆ ಮಾಡುವ ಬಗ್ಗೆ, ಕಾನೂನು ತಜ್ಞರೊಂದಿಗೆ ಚರ್ಚಿಸಲಾಗುವುದು ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ, ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ್ದಾರೆ.

<><><>

ಕೊಪ್ಪಳ ತಾಲೂಕಿನ ಭಾಗ್ಯನಗರದಲ್ಲಿ, ಮಾತನಾಡಿದ ಸಚಿವರು, ಪರಿಹಾರದ ಹಣವನ್ನು 34 ಲಕ್ಷ ರೈತರ ಖಾತೆಗೆ, ನೇರವಾಗಿ ಜಮಾ ಮಾಡುವುದಾಗಿ ತಿಳಿಸಿದರು.

<><><>

ಈ ನಡುವೆ, ಕೇಂದ್ರದ ಈ ನಿರ್ಧಾರವನ್ನು ಬಿಜೆಪಿ ಹಿರಿಯ ನಾಯಕರು, ಸ್ವಾಗತಿಸಿದ್ದಾರೆ.

<><><>

ದೇಶದ ಭವಿಷ್ಯದ ಹಿತ ದೃಷ್ಟಿಯಿಂದ, ಹಲವು ಆಯ್ಕೆಗಳನ್ನು ಪರಿಶೀಲಿಸಿ, ಸಂಸತ್ತಿನಲ್ಲಿ ಮತದಾರರಿಗೆ ಧ್ವನಿಯಾಗಬಲ್ಲ, ಯೋಗ್ಯ ವ್ಯಕ್ತಿಯನ್ನು ಸಂಸದರಾಗಿ ಆರಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಕೋರಿದ್ದಾರೆ. ಬಾಗಲಕೋಟೆ ಜಿಲ್ಲೆ, ರಬಕವಿ–ಬನಹಟ್ಟಿಯ, ಎಸ್.ಆರ್.ಬಿ ಹೈಸ್ಕೂಲ್ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ, 'ಪ್ರಜಾಧ್ವನಿ ಕಾರ್ಯಕ್ರಮದಲ್ಲಿ' ಅವರು ಮಾತನಾಡಿದರು. ತಮ್ಮ ಪಕ್ಷದ ಅಭ್ಯರ್ಥಿ ಸಂಯುಕ್ತಾ ಪಾಟೀಲ್ ಪರ, ಮತಯಾಚಿಸಿದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 38 ಸೆಕೆಂದುಗಳು

<><><>

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ ಪೊಲೀಸ್ ಕವಾಯತು ಮೈದಾನದಲ್ಲಿ, 'ಸ್ವೀಪ್ ಕಪ್' ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿತ್ತು. ಮತದಾರ ಜಾಗ್ರತಿಗಾಗಿ ಆಯೋಜಿಸಲಾದ, ಕ್ರೀಡಾಕೂಟಕ್ಕೆ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ರಾಹುಲ್ ಶಿಂಧೆ ಚಾಲನೆ ನೀಡಿದರು. 85 ವರ್ಷ ಮೇಲ್ಪಟ್ಟ ಹಿರಿಯರು ಹಾಗೂ ವಿಶೇಷ ಚೇತನ ಮತದಾರರು ಮನೆಯಿಂದಲೇ ಮತದಾನ ಮಾಡಿ, ಸಂತಸ ವ್ಯಕ್ತ ಪಡಿಸಿದ್ದಾಗಿ, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಸಿಇಓ ರಾಹುಲ್ ಶಿಂಧೆ ಧ್ವನಿ 26 ಸೆಕೆಂದುಗಳು

<><><>

"ನಮ್ಮ ನಡೆ, ಮತಗಟ್ಟೆಯ ಕಡೆ" ಧ್ಯೇಯದಡಿ, ಮತದಾರ ಜಾಗ್ರತಿ ಹಾಗೂ ಕಡ್ಡಾಯ ಮತದಾನದ ಮಹತ್ವ ತಿಳಿಸಲು, ಮೇ 7 ರಂದು, ಎರಡನೇ ಹಂತದ ಮತದಾನ ನಿಗದಿಯಾಗಿರುವ, 14 ಲೋಕಸಭಾ ಕ್ಷೇತ್ರ ವ್ಯಾಪ್ತಿಯ, 14 ಜಿಲ್ಲೆಗಳಲ್ಲಿ ರಾಜ್ಯಾದ್ಯಂತ ಇಂದು ಬೆಳಗ್ಗೆ 6.30ಕ್ಕೆ, ಸೈಕ್ಲೋಥಾನ್, ಬೈಕ್ ರ್‍ಯಾಲಿ ಆರಂಭವಾಗಿವೆ. ಧಾರವಾಡ ತಾಲೂಕು ಹುಬ್ಬಳ್ಳಿಯ ತೋಳನಕೆರೆಯಿಂದ, 6.30ಕ್ಕೆ ಜಾಥಾ ಆರಂಭವಾಗಿದೆ. ಸೇಂಟ್ ಅಂಥೋನಿ ಶಾಲೆಯಲ್ಲಿ ಧ್ವಜಾರೋಹಣ ಇನ್ನು ಕೆಲವೇ ನಿಮಿಷಗಳಲ್ಲಿ ನೆರವೇರಲಿದೆ. ಕಿಮ್ಸ್ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಆವರಣದಲ್ಲಿ, ಮತದಾರ ಜಾಗ್ರತಿ ಜಾಥಾ ಸಮಾರೋಪಗೊಳ್ಳಲಿದೆ.

<><><>

ಕಲಬುರಗಿ ಜಿಲ್ಲಾ ಸ್ವೀಪ್ ಸಮಿತಿ, ಚಿಂಚೋಳಿ ತಾಲೂಕಿನ ಚಂದ್ರಂಪಳ್ಳಿ ಜಲಾಶಯದಲ್ಲಿ, ದೋಣಿ ವಿಹಾರದ ಮೂಲಕ, ಮತದಾರರ ಜಾಗೃತಿ ಮೂಡಿಸಿತು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನೆಲೆ, ರಾಜ್ಯದ 2ನೇ ಹಂತದ ಮತದಾನ ಮೇ 7 ಮಂಗಳವಾರ ನಿಗದಿಯಾಗಿದೆ. ಕಡ್ಡಾಯವಾಗಿ ಅಂದು ಮತದಾನ ಮಾಡುವಂತೆ, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, ಪ್ರಧಾನ ಕಾರ್ಯದರ್ಶಿ, ಶಂಕರ ಹಲಗತ್ತಿ ಮನವಿ ಮಾಡಿದ್ದಾರೆ.

<><><>

ಶಂಕರ ಹಲಗತ್ತಿ ಧ್ವನಿ 35 ಸೆಕೆಂದುಗಳು

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಇಂದು ಮತ್ತು ನಾಳೆ, ಚುನಾವಣೆ ಪ್ರಚಾರಾರ್ಥ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ. ಬಿಡುವಿಲ್ಲದ ವೇಳಾಪಟ್ಟಿ ಸಿದ್ಧವಾಗಿದ್ದು, ಎರಡು ದಿನ 'ವಿಜಯ ಸಂಕಲ್ಪ ಸಮಾವೇಶ'ದ 5 ಬಹಿರಂಗ ಸಭೆಗಳನ್ನುದ್ದೇಶಿಸಿ, ಅವರು ಮಾತನಾಡಲಿದ್ದಾರೆ.

<><><>

ನಿನ್ನೆ ರಾತ್ರಿ ಬೆಳಗಾವಿಗೆ ಆಗಮಿಸಿ, ವಾಸ್ತವ್ಯ ಹೂಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಮಾಲಿನಿ ಸಿಟಿ ಮೈದಾನದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಚುನಾವಣಾ ಸಮಾವೇಶವನ್ನುದ್ದೇಶಿಸಿ, ಮಾತನಾಡಲಿದ್ದಾರೆ. ತಮ್ಮ ಪಕ್ಷದ ಅಭ್ಯರ್ಥಿ ಜಗದೀಶ ಶೆಟ್ಟರ್ ಪರ ಮತಯಾಚಿಸಲಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯ ಆರು ಹಾಗೂ ಬೆಳಗಾವಿ ಜಿಲ್ಲೆಯ ಕಿತ್ತೂರು, ಖಾನಾಪುರ ಸೇರಿದಂತೆ, ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡ, ಉತ್ತರಕನ್ನಡ ಲೋಕಸಭಾ ಕ್ಷೇತ್ರಕ್ಕೆ, ಮೇ 7 ರಂದು ಮತದಾನ ನಿಗದಿಯಾಗಿದೆ. ಬಿಜೆಪಿಯಿಂದ ಮಾಜಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಕಾಂಗ್ರೆಸ್‌ನಿಂದ ಡಾಕ್ಟರ್ ಅಂಜಲಿ ನಿಂಬಾಳ್ಕರ ಸೇರಿದಂತೆ, ಒಟ್ಟು 13 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

<><><>

ಇಂದು ಮಧ್ಯಾಹ್ನ 12 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಶಿರಸಿಯ ಮಾರಿಕಾಂಬಾ ಕ್ರೀಡಾಂಗಣದಲ್ಲಿ, ಸಾರ್ವಜನಿಕ ಸಭೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ. ತಮ್ಮ ಪಕ್ಷದ ಅಭ್ಯರ್ಥಿ ಪರ ಮತಯಾಚಿಸಲಿದ್ದಾರೆ.

<><><>

ದಾವಣಗೆರೆಯಲ್ಲಿ ಮಧ್ಯಾಹ್ನ 2 ಗಂಟೆಗೆ, ಸಾರ್ವಜನಿಕ ಸಭೆ ಆಯೋಜಿತವಾಗಿದೆ.

<><><>

ಪ್ರಧಾನಮಂತ್ರಿಯವರು, ಸಂಜೆ 4 ಗಂಟೆಗೆ, ವಿಜಯನಗರ ಜಿಲ್ಲೆ, ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ, ತಮ್ಮ ಪಕ್ಷದ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ನಾಳೆ ಬಾಗಲಕೋಟೆಯಲ್ಲಿ ಸಾರ್ವಜನಿಕ ಸಭೆ ಆಯೋಜಿತವಾಗಿದೆ.

<><><>

ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ಹನೂರ ವಿಧಾನಸಭಾ ಕ್ಷೇತ್ರದ ಇಂಡಿಗನಾಥ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮತಗಟ್ಟೆ ಸಂಖ್ಯೆ 146ರಲ್ಲಿ ನಾಳೆ, ಸೋಮವಾರ ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ, ಮರು ಮತದಾನ ನಿಗದಿಯಾಗಿದೆ. ಶುಕ್ರವಾರ 26 ರಂದು ನಡೆದ ಮತದಾನದ ವೇಳೆ ಸಂಭವಿಸಿದ, ಅಹಿತಕರ ಘಟನೆಯಿಂದಾಗಿ, ಈ ಮತಗಟ್ಟೆಯಲ್ಲಿ ಮತದಾನ ನಡೆದಿರಲಿಲ್ಲ. ಮತಗಟ್ಟೆ ಅಧಿಕಾರಿಗಳ ವರದಿ ಆಧರಿಸಿ, ಮರು ಮತದಾನಕ್ಕೆ ಚುನಾವಣಾ ಆಯೋಗ ಆದೇಶಿಸಿದೆ.

<><><>

ಕೊಡಗು ಜಿಲ್ಲೆಯ ನಾಪೋಕ್ಲುವಿನ, ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ, 'ಕುಂಡ್ಯೋಳಂಡ ಕಪ್ ಹಾಕಿ ಉತ್ಸವ'ದ ಅಂತಿಮ ಪಂದ್ಯದಲ್ಲಿ, ಇಂದು ನೆಲ್ಲಮಕ್ಕಡ ಮತ್ತು ಚೇಂದಂಡ ಕುಟುಂಬಗಳ ಹಾಕಿ ತಂಡದ ನಡುವೆ, ರೋಚಕ ಪಂದ್ಯ ನಡೆಯಲಿದೆ. 30 ಸಾವಿರ ಹಾಕಿ ಪ್ರೇಮಿಗಳು ಫೈನಲ್ ಪಂದ್ಯಾಟ ವೀಕ್ಷಿಸುವ ನಿರೀಕ್ಷೆ ಇದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು, ಕಾರ್ಯನಿರ್ವಹಿಸುವ ಸ್ಥಳದಲ್ಲಿ, ಸುರಕ್ಷತೆ ಮತ್ತು ಆರೋಗ್ಯ ಕಾಪಾಡುವ ವಿಶ್ವ ದಿನಾಚರಣೆ. ಬದಲಾಗುತ್ತಿರುವ ವಾತಾವರಣದ ಹಿನ್ನೆಲೆ, ಕಾರ್ಮಿಕ ಸುರಕ್ಷತೆಗೆ ಆದ್ಯತೆ, ಈ ದಿನದ ಆಚರಣೆಯ ಪ್ರಾಮುಖ್ಯತೆ.

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ಶಿಗ್ಗಾಂವ-ಸವಣೂರ ವಿಧಾನಸಭಾ ಕ್ಷೇತ್ರದ ಎನ್. ಎಂ. ತಡಸ, ಬೆಂಡಿಗೇರಿ, ಮಣಕಟ್ಟಿ ಹಾಗೂ ಕಬನೂರ ಗ್ರಾಮಗಳಲ್ಲಿ ಪ್ರಚಾರ ಸಭೆಯಲ್ಲಿ ಭಾಗವಹಿಸಿದರು.

<><><>

ಯಾದಗಿರಿ ಜಿಲ್ಲೆ, ಸುರಪುರ ವಿಧಾನಸಭಾ ಕ್ಷೇತ್ರದಲ್ಲಿ, ನೀತಿ ಸಂಹಿತೆ ಉಲ್ಲಂಘಿಸಿದ 7 ಪ್ರಕರಣಗಳನ್ನು, ಕಳೆದ ಒಂದು ವಾರದಲ್ಲಿ ದಾಖಲಿಸಲಾಗಿದೆ ಎಂದು ವಿಧಾನಸಭೆ ಉಪ ಚುನಾವಣಾಧಿಕಾರಿ ಕಾವ್ಯಾರಾಣಿ ತಿಳಿಸಿದ್ದಾರೆ.

<><><>

ಪ್ರಸಿದ್ಧ ಚಾರ್‌ಧಾಮ್ ಯಾತ್ರೆಗೆ 16 ಲಕ್ಷ ಭಕ್ತಾದಿಗಳು ಹೆಸರು ನೋಂದಾಯಿಸಿದ್ದಾರೆ.

<><><>

ಉಡುಪಿ ಜಿಲ್ಲೆಯ, ಮಲ್ಪೆ ಬಂದರಿಗೆ ಆಗಮಿಸುವ ಪ್ರವಾಸಿಗರು, ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಪೌರಾಯುಕ್ತರು ತಿಳಿಸಿದ್ದಾರೆ.

<><><>

ಗದಗ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಭರತ್ ಎಸ್., ಮುಂಡರಗಿ ತಾಲೂಕಿನ ವಿರುಪಾಪೂರ ತಾಂಡಾ, ಮುಂಡವಾಡ, ಬಿದರಹಳ್ಳಿ ಮತ್ತು ಜಾಲವಾಡಗಿ ಗ್ರಾಮಗಳಲ್ಲಿ, ತೋಟಗಾರಿಕೆ ಇಲಾಖೆಯಿಂದ ಸಹಾಯ ಧನ ಪಡೆದು, ಬಾಳೆ ಬೆಳೆ ಬೆಳೆದ ರೈತರ ಜಮೀನಿಗೆ ಭೇಟಿ ನೀಡಿ, ರೈತರೊಂದಿಗೆ ಸಮಾಲೋಚಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ಕೇಂದ್ರದಿಂದ, ರಾಜ್ಯಕ್ಕೆ ಮೂರು ಸಾವಿರದ 454 ಕೋಟಿ ರೂಪಾಯಿ ಬರ ಪರಿಹಾರ ಬಿಡುಗಡೆ, ಘೋಷಣೆ.
- ಕೇಂದ್ರದಿಂದ ಹೆಚ್ಚುವರಿ ಬರ ಪರಿಹಾರ ಹಣ ಬಿಡುಗಡೆ ಕುರಿತು, ಕಾನೂನು ತಜ್ಞರೊಂದಿಗೆ ಚರ್ಚೆ – ಕೃಷ್ಣ ಬೈರೇಗೌಡ.
- ಪ್ರಧಾನಮಂತ್ರಿ ನರೇಂದ್ರ ಮೋದಿ, ಚುನಾವಣೆ ಪ್ರಚಾರಾರ್ಥ ಇಂದು ಮತ್ತು ನಾಳೆ, ರಾಜ್ಯ ಪ್ರವಾಸ.
- ‘ಕುಂಡ್ಯೋಳಂಡ ಕಪ್ ಹಾಕಿ ಉತ್ಸವ’; ನೆಲ್ಲಮಕ್ಕಡ ಮತ್ತು ಚೇಂದಂಡ ತಂಡಗಳ ನಡುವೆ, ಇಂದು ಫೈನಲ್ ಪಂದ್ಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ